ವಿಷಯ :- ಸರ್ಕಾರ ಮಂಜೂರು ಮಾಡಲಾದ ಗ್ರಾನೈಟ್ ಕಲ್ಲುಗಣಿ ಗುತ್ತಿಗೆಗಳನ್ನು ಉಚ್ಚನ್ಯಾಯಾಲಯ ರದ್ದು ಪಡಿಸಿರುವುದು.

Q : 610

ಶ್ರೀ ಆರ್. ವಿ. ದೇಶ್‌ಪಾಂಡೆ (ಹಳಿಯಾಳ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ರಲ್ಲಿ ಸರ್ಕಾರವು ಮಂಜೂರು ಮಾಡಲಾದ ಗ್ರಾನೈಟ್ ಕಲ್ಲುಗಣಿ ಗುತ್ತಿಗೆಗಳನ್ನು ಕರ್ನಾಟಕ ಉಚ್ಚನ್ಯಾಯಾಲಯವು ರದ್ದು ಪಡಿಸಿದ್ದು ನಿಜವಲ್ಲವೇ?

ಆ) ರಾಜ್ಯದ ಎಲ್ಲಾ ಕಡೆ ಈ ಕಲ್ಲುಗಣಿ ಗುತ್ತಿಗೆಗಳಲ್ಲಿ ಕಾನೂನು ಬಾಹಿರ ಹಾಗೂ ಅನಧಿಕೃತವಾಗಿ ಗಣಿಗಾರಿಕೆ ಈಗಲೂ ನಡೆಯುತ್ತಿರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ ಸರ್ಕಾರ ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಕರ್ನಾಟಕ ಉಚ್ಚನ್ಯಾಯಾಲಯದ ತೀರ್ಪು ದಿನಾಂಕ 13-3-92ರಲ್ಲಿ ಮಂಜೂರು ಮಾಡಲಾಗಿದ್ದ ಎಲ್ಲಾ ಕಲ್ಲುಗಣಿ ಗುತ್ತಿಗೆಗಳನ್ನು ರದ್ದು ಮಾಡಲಾಗಿದೆ. ಮತ್ತು ಸರ್ಕಾರವು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1969ರ ನಿಯಮ 62ಕ್ಕೆ 62ಎ ಮತ್ತು 62ಬಿ ಯನ್ನು ಸೇರಿಸಿ, ತಿದ್ದುಪಡಿ ಹೊರಡಿಸಿದೆ. ಇದರ ಅನ್ವಯ ಗ್ರಾನೈಟ್ ಸಾಗಾಣಿಕೆಯನ್ನು ಪರವಾನಗಿಯನ್ನು ಪಡೆದೇ ಸಾಗಿಸಬೇಕೆಂಬ ಕಡ್ಡಾಯವನ್ನು ವಿಧಿಸಿದೆ. ತಪ್ಪಿದಲ್ಲಿ ಹತ್ತು ಪಟ್ಟು ರಾಜಧನವನ್ನು ದಂಡವಾಗಿ ಕೊಡಬೇಕಾಗುವುದು. ದಂಡವನ್ನು ಕಟ್ಟದೇ ಇದ್ದ ಪಕ್ಷದಲ್ಲಿ ಗ್ರಾನೈಟ್ ದಿಮ್ಮಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ವಿಷಯ :- ಸರ್ಕಾರಿ ಸಾಬೂನು ಕಾರ್ಖಾನೆ ಕುರಿತು.

Q : 14

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಸಾಬೂನು ಕಾರ್ಖಾನೆ ನಷ್ಟದಲ್ಲಿದೆಯಲ್ಲವೆ?

ಆ) ಆ ಕಾರ್ಖಾನೆಯಲ್ಲಿ 1990-91, 1991-92ನೇ ಡಿಸೆಂಬರ್ ಅಖೈರವರೆಗಿನ ನಷ್ಟವೆಷ್ಟು (ಪ್ರತ್ಯೇಕವಾಗಿ ವಿವರ ಕೊಡುವುದು)?

ಇ) ಈ ಕಾರ್ಖಾನೆಯಲ್ಲಿ ಸಿಬ್ಬಂದಿಗಳು ಲೆಕ್ಕಕಿಂತ ಜಾಸ್ತಿ ಇರುವುದನ್ನು